ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎಸ್‌ಎಸ್ — ೯೯

೩ನೇ ವರ್ಷ ೧೩ನೇ ಸಂಚಿಕೆ ಕೊಪ್ಪ ೧೮-೧೧-೯೮೪ ಭಾನುವಾರ ಬೆಲೆ ೪೦ ಪೈಸೆ

ಉದ್ಯೋಗ ವಾರ್ತೆ

ಬ್ಯಾಂಕಿನ ಹುದ್ದೆಗಳಿಗೆ ಅರ್ಜಿ ಕರೆದಿದೆ

ಬ್ಯಾಂಕಿಂಗ್ ಸರ್ವೀಸ್ ರಿಕ್ರೂಟ್‌ಮೆಂಟ್ ಬೋರ್ಡ್ ಕರ್ನಾಟಕಕ್ಕೆ ೧೯೮೪–೮೫ ಕ್ಯಾಗಿ ಟೈಪಿಸ್ಟ್, ಟೆಲಿಫೋನ್ ಆಪರೇಟರ್ ಸೇರಿದಂತೆ ಕ್ಲರಿಕಲ್ ಹುದ್ದೆಗಳಿಗೆ ಅರ್ಜಿಗಳನ್ನು ಕರೆದಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೇ ದಿನಾಂಕ ೧೭–೧೨–೮೪. ಹೆಚ್ಚಿನ ವಿವರಗಳಿಗೆ ೧೬–೧೧–೮೪ರ ಪತ್ರಿಕೆಗಳನ್ನು ನೋಡಿ.

ಸೈನ್ಯಕ್ಕೆ ಭರ್ತಿ

ಬೆಂಗಳೂರಿನ ೮೭. ರೆಸಿಡೆನ್ಸಿ ರಸ್ತೆಯಲ್ಲಿರುವ ಸೈನಿಕ ಭರ್ತಿ ಕಾರ್ಯಾಲಯದಲ್ಲಿ ನ ೧೯.೨೨ ಮತ್ತು ೨೩ರ ಬೆಳಿಗ್ಗೆ ೭–೩೦ಕ್ಕೆ ಸೈನ್ಯಕ್ಕೆ ಭರ್ತಿಮಾಡಿಕೊಳ್ಳುವ ಕಾರ್ಯಕ್ರಮವಿದೆ. ಕನಿಷ್ಠ ಐದನೇ ತರಗತಿ ತೇರ್ಗಡೆಯಾಗಿದ್ದು. ಉತ್ತಮ ದೇಹದಾರ್ಢ್ಯವಿರುವ ೧೬ರಿಂದ ೨೫ ವರ್ಷದೊಳಗಿನವರು, ತಮ್ಮ ಮಾರ್ಕ್ಸ್ ಕಾರ್ಡ್/ಸರ್ಟಿಫಿಕೇಟ್‌ನ ಮೂಲ ಪ್ರತಿ, ಕ್ಯಾರೆಕ್ಟರ್ ಸರ್ಟಿಫಿಕೇಟ್ ಎನ್‌ಸಿಸಿ ಸರ್ಟಿಫಿಕೇಟ್ ಮತ್ತು ೨ ಪಾಸ್‌ಪೋರ್ಟ್ ಸೈಜ್ ಫೋಟೋಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದು.

ಈ ನಡುವೆ, ಉತ್ತರಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು, ಹಾಸನ ಮತ್ತ ಶಿವಮೊಗ್ಗ ಜಿಲ್ಲೆಗಳಿಗಾಗಿ ಮಂಗಳೂರಿನಲ್ಲಿ ಸೈನಿಕ ಭರ್ತಿ ಕಾರ್ಯಾಲಯದ ಹೊಸಶಾಖೆಯೊಂದನ್ನು ಸೆಪ್ಟೆಂಬರ್‌ನಿಂದ ತೆರೆಯಲಾಗಿದೆ. ಮೇಲ್ಕಂಡ ಜಿಲ್ಲೆಗಳ ಆಸಕ್ತರು ಈ ಶಾಖೆಗೆ ವರದಿ ಮಾಡಿಕೊಳ್ಳಬಹುದಾಗಿದೆಯೆಂದು ಪ್ರಕಟಣೆಯೊಂದು ತಿಳಿಸಿದೆ.

ಜಿಲ್ಲಾಧಿಕಾರಿ ಪ್ರವಾಸ ರದ್ದು

ಚಿಕ್ಕಮಗಳೂರು: ಲೋಕಸಭಾ ಚುನಾವಣೆಗಳು ಘೋಷಣೆಯಾಗಿದ್ದು ತಮ್ಮ ಕೇಂದ್ರ ಸ್ಥಾನದಲ್ಲೇ ಇರಬೇಕಾಗಿರುವುದರಿಂದ ಜಿಲ್ಲಾಧಿಕಾರಿಗಳು ತಮ್ಮ ನ. ೨೦ರಿಂದ ೩೦ರ ವರೆಗಿನ ಎಲ್ಲಾ ಪ್ರವಾಸಗಳನ್ನು ರದ್ದು ಮಾಡಿದ್ದಾರೆ.

ತಮ್ಮನ್ನ ಭೇಟಿಯಾಗಲು ಬರುವ ಸಾರ್ವಜನಿಕರು ಈ ಅವಧಿಯಲ್ಲಿ ಮಧ್ಯಾಹ್ನ ೩–೩೦ ರಿಂದ ಮಾತ್ರ ಭೇಟಿ ಮಾಡಬೇಕೆಂದು ಅವರು ವಿನಂತಿಸಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗೆ ವಿರೋಧ

ಸರ್ಕಾರದ ಗಮನ ಸೆಳೆಯಲು ಯಶಸ್ವಿ ಧರಣಿ

ಚಿಕ್ಕಮಗಳೂರು: ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲು ಸರ್ಕಾರ ಪ್ರಯತ್ನಿಸುತ್ತಿರುವ ಭದ್ರಾ ಮೇಲ್ದಂಡೆ ಯೋಜನೆ ಕಾರ್ಯಗತವಾದರೆ ಜಿಲ್ಲೆಗೆ ಆಗುವ ಸರ್ವತೋಮುಖವಾದ ವಿನಾಶದ ಬಗ್ಗೆ ಸರ್ಕಾರದ ಗಮನ ಸೆಳೆಯಲು ನ. ೧೭ರಂದು ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯೆದುರು ಯಶಸ್ವಿ ಧರಣಿ ನಡೆಯಿತು.

ಜಿಲ್ಲೆಯ ವಿವಿಧ ಭಾಗಗಳಿಂದ ಕೇವಲ ಸಾಂಕೇತಿಕವಾಗಿ ಪ್ರಾತಿನಿಧ್ಯ ವಹಿಸಿ ಸುಮಾರು ೧೫೦ ಜನ ಧರಣಿಯಲ್ಲಿ ಭಾಗವಹಿಸಿದ್ದರು. ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ ಮತ್ತು ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಎಸ್.ಎಸ್. ಪಾವಟೆ ಧರಣಿಕಾರರನ್ನು ಭೆಟಿ ಮಾಡಿ, ಮನವಿ ಸ್ವೀಕರಿಸಿ ಅದನ್ನು ಸರ್ಕಾರದ ಮುಂದೆ ಮಂಡಿಸುವ ಭರವಸೆ ಕೊಟ್ಟರು.

ಕೊಪ್ಪ ಲಯನ್ಸ್, ಕೊರಡಿಹಿತ್ಲು ಆಸ್ಪತ್ರೆಗಳ ಆಶ್ರಯದಲ್ಲಿ

ಆರೋಗ್ಯ ಪರೀಕ್ಷೆಯ ಅಪೂರ್ವ ಶಿಬಿರ

ಕೊಪ್ಪ: ನ. ೨೫ರ ಭಾನುವಾರ ಬೆಳಿಗ್ಗೆ ೮ರಿಂದ ಸಂಜೆ ೪ರ ವರೆಗೆ ಕೊರಡಿಹಿತ್ಲು ಆಸ್ಪತ್ರೆಯಲ್ಲಿ ಕೊಪ್ಪ ಲಯನ್ಸ್ ಕ್ಲಬ್‌ನ ಸಹಯೋಗದೊಂದಿಗೆ ಮಣಿಪಾಲದಪ್ರಸಿದ್ಧ ವೈದ್ಯರುಗಳಿಂದ ಅಪೂರ್ವವಾದ ಒಂದು ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ಇದರಲ್ಲಿ **ಮಕ್ಕಳ ರೋಗ, ಸ್ತ್ರೀರೋಗ ಮತ್ತು ಗರ್ಭಿಣಿ ಸ್ತ್ರೀಯರ ಪರೀಕ್ಷೆ, ಗರ್ಭದ ಕ್ಯಾನ್ಸರ್ ಕಂಡು ಹಿಡಿದು ಸಲಹೆ ನೀಡುವಿಕೆ, ಚರ್ಮರೋಗ ಮತ್ತು ಲೈಂಗಿಕ ರೋಗಗಳ ತಪಾಸಣೆ ಮತ್ತು ಸಲಹೆ**—ಇವುಗಳನ್ನು ನಡೆಸಲಾಗುವುದು. ತಮ್ಮ ವೈದ್ಯರಿಂದ ಪರಿಚಯ ಪತ್ರ ತಂದವರಿಗೆ ಆದ್ಯತೆ. ಅಂದು ಕೊಪ್ಪದಿಂದ ಕೊರಡಿಹಿತ್ಲಿಗೆ ಉಚಿತ ಬಸ್ ಸೌಕರ್ಯವನ್ನು ಶಂಕರ್ ಕಂಪನಿ ಏರ್ಪಡಿಸಿದೆ.

ಇಂಥ ಅಪರೂಪದ ಅವಕಾಶವನ್ನು ಹೆಚ್ಚು ಜನ ಉಪಯೋಗಿಸಿಕೊಳ್ಳಬೇಕೆಂದು ಕೋರಲಾಗಿದೆ.

ಲೆಪ್ರೋಸ್ಕೋಪಿಕ್ ಶಿಬಿರಗಳು

ತಲಮಕ್ಕಿ ಗ್ರಾಮ ಪಂಚಾಯ್ತಿ ಮತ್ತು ಲಯನ್ಸ್ ಆಶ್ರಯದಲ್ಲಿ ನ. ೨೮ರಂದು ಕುದ್ರೆಗುಂಡಿಯಲ್ಲಿ ಉದರ ದರ್ಶಕ ಸಂತಾನ ಹರಣ ಶಸ್ತ್ರಚಿಕಿತ್ಸಾ ಶಿಬಿರ ಏರ್ಪಟ್ಟಿದೆ. ನ. ೨೧ರಂದು ಹರಿಹರಪುರದಲ್ಲೂ ನಡೆಯುತ್ತದೆ ಇವುಗಳಲ್ಲಿ ಭಾಗವಹಿಸುವವರಿಗೆ ಸರ್ಕಾರದ ಪ್ರೋತ್ಸಾಹ ಭತ್ಯವಲ್ಲದೆ ಇತರ ದಾನಿಗಳೂ ಹಲವು ಉಡುಗೊರೆಗಳನ್ನು ನೀಡಲಿದ್ದಾರೆ.

ಉತ್ತಮೇಶ್ವರದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ

ನ. ೧೮ರಂದು ಉತ್ತಮೇಶ್ವರದಲ್ಲಿ ಗ್ರಾಮ ಪಂಚಾಯ್ತಿ ಮತ್ತು ಲಯನ್ಸ್ ಕ್ಲಬ್ ಆಶ್ರಯದಲ್ಲಿ ಏರ್ಪಡಿಸಿದ್ದ ಶಿಬಿರದಲ್ಲಿ ಡಾ|| ಅರುಣಾಚಲ, ಮಾನಸಿಕ ತಜ್ಞರು, ಡಾ|| ನಂಜಪ್ಪ, ಕಿವಿ-ಮೂಗು-ಗಂಟಲು ತಜ್ಞರು, ಡಾ|| ಸತೀಶ್, ಮಕ್ಕಳ ತಜ್ಞರು, ಡಾ|| ಪದ್ಮನಾಭ್, ಮೂಳೆ ತಜ್ಞರು, ಡಾ|| ಭಗವಾನ್, ದಂತ ವೈದ್ಯರು ಹಾಗೂ ಡಾ|| ಕೊಟ್ರಯ್ಯ. ಎಂ.ಡಿ., ಫಿಸಿಶಿಯನ್—ಇವರುಗಳು ಸುಮಾರು ೮೭೦ ಜನ ರೋಗಿಗಳನ್ನು ಪರೀಕ್ಷಿಸಿ ಸಲಹೆಗಳನ್ನು ನೀಡಿದರು. ೧೦೦ಕ್ಕೂ ಹೆಚ್ಚು ಮಕ್ಕಳಿಗೆ ಬಿ.ಸಿ.ಜಿ. ಮತ್ತು ಇತರ ಚುಚ್ಚು ಮದ್ದುಗಳನ್ನು ನೀಡಲಾಯಿತು. ಸುಮಾರು ೪೦೦ ರೂ. ಬೆಲೆಯ ಔಷಧಿಗಳನ್ನು ಉಚಿತವಾಗಿ ವಿನಿಯೋಗಿಸಲಾಯಿತು. ಈ ಕಾರ್ಯಕ್ರಮದಿಂದ ಹತ್ತಾರು ಹಳ್ಳಿಗಳ ಜನರಿಗೆ ಬಹಳ ಪ್ರಯೋಜನವಾಯಿತು.

ಶಿವಮೊಗ್ಗ ಅಡಿಕೆ ಪೇಟೆ

ತಾ|| ೧೫-೧೧-೯೮೪.

ಸರಕು: ೨೭೦೧ – ೩೧೫೦

ಬೆಟ್ಟೆ: ೯೮೦ – ೨೦೩೦

ಗೊರಬಲು: ೮೪೦ – ೧೨೯೯

ಬಸ್ ಸ್ಟ್ಯಾಂಡ್ ಹೋಟೆಲ್ ತಿಂಡಿ ಬೆಲೆ ಇಳಿಸಲು ಒಪ್ಪಂದ

ಕೊಪ್ಪ: ತಾ|| ರೈತ ಸಂಘದ ಕಾರ್ಯದರ್ಶಿ ಮಳಿಗೆ ಸುರೇಶ್ ಅವರು ಇಲ್ಲಿನ ಬಸ್ ಸ್ಟ್ಯಾಂಡ್ ಹೋಟೆಲಿನಲ್ಲಿ ತಿಂಡಿ-ತೀರ್ಥಗಳ ಬೆಲೆ ವಿಪರೀತವಾಗಿರುವುದೆಂದು ದೂರಿತ್ತ ಪ್ರಯುಕ್ತ ಪುರಸಭಾಧ್ಯಕ್ಷ ಕೆ.ವಿ.ಮಂಜುನಾಥ ಶೆಟ್ಟಿ ಅವರು ಸಂಧಾನ ನಡೆಸಿ, ಕೆಲವು ಬೆಲೆಗಳನ್ನು ಇಳಿಸಲು ಮಾಲೀಕರನ್ನು ಒಪ್ಪಿಸಿದ್ದಾಗಿ ತಿಳಿದು ಬಂದಿದೆ. ತಾವು ತಿಂಡಿ-ತೀರ್ಥಗಳ ಗುಣಮಟ್ಟ ಮತ್ತು ಪ್ರಮಾಣ ಉತ್ತಮ ಮಟ್ಟದಲ್ಲಿಟ್ಟಿರುವುದರಿಂದ ಇಷ್ಟು ಬೆಲೆ ಅನಿವಾರ್ಯವೆಂದು ಹೋಟೆಲ್ ಮಾಲೀಕರು ಹೇಳಿದರೂ ಅನಂತರ ಸಾರ್ವಜನಿಕ ಕೋರಿಕೆಗೆ ಮನ್ನಣೆ ನೀಡುವ ಸಲುವಾಗಿ ಬೆಲೆ ಇಳಿಸಲು ಒಪ್ಪಿದರೆನ್ನಲಾಗಿದೆ.

ಒಂದು ಸ್ಪಷ್ಟನೆ

ನಮ್ಮ ೨೮–೧೦–೮೪ರ ಸಂಚಿಕೆಯಲ್ಲಿ ಶೃಂಗೇರಿಯ ಶಾರದಾ ಧನ್ವಂತರಿ ಆಸ್ಪತ್ರೆಯ ಬಗ್ಗೆ 'ಒಂದು ತಿಂಗಳು ಆಯಸ್ಸು ವೃದ್ಧಿಸಿದ ವೈದ್ಯೆ' ಎಂಬ ವರದಿ ಪ್ರಕಟಿಸಿದ್ದೆವು. ದಿನ ತುಂಬಿರದಿದ್ದ ಗರ್ಭಿಣಿಯೊಬ್ಬರಿಗೆ ಅಚಾತುರ್ಯದಿಂದ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಮಾಡಿ ಹೆರಿಗೆ ಮಾಡಿಸಿದರೆಂಬುದು ವರದಿಯ ಮುಖ್ಯಾಂಶ. ನಮಗೆ ಬಂದ ಒಂದು ಸಾರ್ವಜನಿಕ ದೂರಿನ ಆಧಾರದ ಮೇಲೆ, ನಮಗೆ ಸಮರ್ಪಕವೆಂದು ಕಂಡ ಮತ್ತು ಸಾಧ್ಯವಿದ್ದ ರೀತಿಯಲ್ಲಿ ತನಿಖೆ, ವಿಚಾರಣೆ ನಡೆಸಿ ವರದಿ ಮಾಡಿದ್ದೆವು. ಅಚಾತುರ್ಯ ನಡೆದಿರುವುದಾದಲ್ಲಿ, ಅಂಥದು ಪುನಃ ನಡೆದು ದುರಂತಕ್ಕೆ ಅವಕಾಶವಾಗುವ ಮೊದಲು ಸಂಬಂಧಪಟ್ಟವರು ಎಚ್ಚರಿಕೆವಹಿಸಲಿ ಎಂಬುದು ನಮ್ಮ ಆಶಯವಾಗಿತ್ತು.

ಈ ಬಗ್ಗೆ ಬಂದ ಸ್ಪಷ್ಟೀಕರಣಗಳ ಕುರಿತು ಪರಿಶೀಲಿಸಲು ಇನ್ನೊಮ್ಮೆ ನ.೧೫ರಂದು ನಾವು ಆಸ್ಪತ್ರೆಗೆ ಭೇಟಿ ಕೊಟ್ಟಾಗ ರೋಗಿಯನ್ನು ನಾಲ್ಕು ಜನ ವೈದ್ಯರುಗಳು ಪರೀಕ್ಷಿಸಿ,ಚರ್ಚಿಸಿ, ದಿನ ತುಂಬಿರದಿದ್ದರೂ ಶಸ್ತ್ರ ಚಿಕಿತ್ಸೆ ಮೂಲಕ ಹೆರಿಗೆ ಅನಿವಾರ್ಯವೆಂದು ನಿರ್ಣಯಿಸಿದ ವಿವರಗಳನ್ನು ನೀಡಿ ದಾಖಲೆಗಳನ್ನು ನಮಗೆ ತೋರಿಸಲಾಯಿತಲ್ಲದೆ, ಮಣಿಪಾಲಕ್ಕೆ ಹೋಗಲು ತಮಗೆ ಶಕ್ಯವಿಲ್ಲವೆಂದು ರೋಗಿಯ ಬಂಧುಗಳು ಹೇಳಿದ್ದರಿಂದ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನೆರವೇರಿಸಿದ್ದಾಗಿ ತಿಳಿಸಲಾಯಿತು. ಮಗು ಮತ್ತು ಬಾಣಂತಿ ಆರೋಗ್ಯದಿಂದಿರುವುದಾಗಿ ಹೇಳಲಾಗಿದೆ.

ಇಲ್ಲಿ, ಆಸ್ಪತ್ರೆಯ ಬಗ್ಗೆ ಸಕಾರಣವಾಗಿಯೋ ಅಕಾರಣವಾಗಿಯೋ ಹಬ್ಬಿರುವ ಅನೇಕ ವದಂತಿಗಳ ಹಿನ್ನೆಲೆಯಲ್ಲಿ ಹಲವರ ತಪ್ಪು ತಿಳುವಳಿಕೆಗಳ ಕಾರಣದಿಂದಾಗಿ, ಸದುದ್ದೇಶದಿಂದಲೇ ಅದರೂ ಇಂಥದೆಂದು ವರದಿ ಪ್ರಕಟವಾಗಲು ಕಾರಣವಾಗಿದೆ.

ಸಂಪಾದಕ.

೧೯೭೫ ರಿಂದ ೨–೮–೮೪ರ ನಡುವೆ ನಿವೃತ್ತರಾದ ಶಾಲಾ ಶಿಕ್ಷಕರಿಗೆ ೩ ವರ್ಷಗಳ ಸಂಬಳ–ಭತ್ಯೆ, ಅದರಂತೆ ಪೆನ್‌ಶನ್ ಸಹ ಕೊಡಿಸಬೇಕೆಂದು ಕೊಪ್ಪ–ಶೃಂಗೇರಿ ತಾ|| ಗಳ ಸರ್ಕಾರಿ ನಿವೃತ್ತ ಅಧಿಕಾರಿಗಳ ಸಂಘ ತನ್ನ ಕೇಂದ್ರ ಸಂಘವನ್ನು ಒತ್ತಾಯಿಸಿದೆ.

ಮಾಜಿ ಪಟೇಲರ ಸಂಘ

ಸರ್ಕಾರ ಮಾಜಿ ಪಟೇಲರಿಗೆ ಅನುಕಂಪ ಭತ್ಯೆ ಘೋಷಿಸಿದ್ದು, ಆನುವಂಶಿಕ ಮತ್ತು ೪೨೦೦ರೂ.ಗಿಂತ ವಾರ್ಷಿಕ ವರಮಾನ ಕಮ್ಮಿ ಇರಬೇಕೆಂದು ನಿಬಂಧನೆ ವಿಧಿಸಲಾಗಿದೆ. ಈ ನಿಬಂಧನೆ ತೆಗೆದುಹಾಕಿ, ವರಮಾನದ ಪರಿಗಣನೆಯಿಲ್ಲದೆ, ಆನುವಂಶಿಕವಾಗಿ ಪಟೇಲರಾಗಿದ್ದವರಿಗೂ, ಗುಮಾಸ್ತರಾಗಿದ್ದ ಪಟೇಲರಿಗೂ ಎಲ್ಲರಿಗೂ ಭತ್ಯೆ ಲಭ್ಯವಾಗುವಂತೆ ಆದೇಶ ಹೊರಡಿಸಬೇಕೆಂದು ಶೃಂಗೇರಿ ಕ್ಷೇತ್ರದ ಮಾಜಿ ಪಟೇಲರ ಸಂಘ ಒತ್ತಾಯಿಸಿದೆ.

ಕೊಪ್ಪ: ಇಲ್ಲಿನ ಪುರಸಭಾ ಉಪಾಧ್ಯಕ್ಷರ ಮೇಲೆ ಸಭೆ ನಡೆಯುತ್ತಿದ್ದಾಗ ಹಲ್ಲೆ ನಡೆಸಿದ ಆಪಾದನೆಯ ಮೇಲೆ ಶೇಷಪ್ಪ ಗೋಪಾಲ್ ಎಂಬ ಯುವಕನಿಗೆ ೨೦ ರೂ. ದಂಡ ವಿಧಿಸಲಾಗಿರುವುದಾಗಿ ಗೊತ್ತಾಗಿದೆ.

ಇಂದಿರಾ ಹತ್ಯೆ, ಸಿಖ್ಖರ ನರಮೇಧ: ಒಂದು ಹಿನ್ನೋಟ

ಭಟ್ಟಂಗಿಗಳು, ಗೂಂಡಾಗಳು....

ದಿ॥ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆ ಮತ್ತು ಅನಂತರ ಉತ್ತರ ಭಾರತದ ವಿವಿಧೆಡೆ ಸಿಖ್ಖರ ಮೇಲೆ ನಡೆದ ಹಿಂಸಾ ಕಾಂಡಗಳ ಕುರಿತು ವಿವರವಾದ ತನಿಖಾ ವರದಿಗಳು, ವಿಶ್ಲೇಷಣೆಗಳು ಪ್ರಕಟವಾಗುತ್ತಿವೆ.

ಒಂದೆಡೆ, ಇಂದಿರಾ ಗಾಂಧಿಯವರ ಹತ್ಯೆಯ ಹಿಂದು-ಮುಂದಿನ ಸಂಗತಿಗಳ ಕುರಿತು ಪ್ರಶ್ನೆ, ತರ್ಕಗಳಿದ್ದರೆ, ಇನ್ನೊಂದೆಡೆ, ಅನಂತರದ ಗಲಭೆಗಳ ಹಿನ್ನೆಲೆ ಮತ್ತು ಕಾರಣಗಳ ವಿಶ್ಲೇಷಣೆ, ವರದಿಗಳು ಬರುತ್ತಿವೆ.

ಶ್ರೀಮತಿ ಗಾಂಧಿ ಕೊಲೆಯಾದ ದಿನ ದೆಹಲಿಯಲ್ಲಿದ್ದ 'ಮುಂಗಾರು' ಪ್ರಧಾನ ಸಂಪಾದಕ ವಡ್ಡರ್ಸೆ ರಘುರಾಮ ಶೆಟ್ಟಿಯವರು, ಹತ್ಯೆಯ ಸಂದರ್ಭದ ಕೆಲವು ವಿದ್ಯಮಾನಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ತಿಗಣೆಗಳು

ಇಂದಿರಾ ಗಾಂಧಿಯವರ ಬಗ್ಗೆ ಐರಿಷ್ ಟೆಲಿವಿಶನ್ ಚಿತ್ರ ತಯಾರಕ ಪೀಟರ್ ಉಸ್ತಿನೋವ್ ಒಂದು ಟಿ. ವಿ. ಸಾಕ್ಷ್ಯಚಿತ್ರ ತೆಗೆಯುತ್ತಿದ್ದು, ಅ. ೩೧ ರ ಬೆಳಿಗ್ಗೆ ೯-೩೦ಕ್ಕೆ ಆಕೆಯ ಟಿ.ವಿ. ಸಂದರ್ಶನ ಕಾರ್ಯಕ್ರಮ ಚಿತ್ರೀಕರಿಸುವವರಿದ್ದರು. ಅದಕ್ಕಾಗಿ ಬೆಳಗಿನ ಬೇರೆಲ್ಲ ಕಾರ್ಯಕ್ರಮ ರದ್ದು ಪಡಿಸಿದ್ದ ಇಂದಿರಾ ತಮ್ಮ ಮನೆಯಿಂದ ಪಕ್ಕದ ಗೃಹ ಕಚೇರಿಗೆ ಆಪ್ತ ಸಹಾಯಕ ರೊಡನೆ ಹೋಗುತ್ತಿದ್ದಾಗ ಎದುರಿಗೆ ಬಂದು ಸೆಲ್ಯೂಟ್ ಮಾಡಿದ ಆಕೆಯ ಅಂಗ ರಕ್ಷಕರೇ ಆಕೆಯ ಮೇಲೆ ಗುಂಡಿನ ಮಳೆಗರೆದರು.

ಇಲ್ಲಿ ಅವರ ಆಪ್ತರ, ಅವರನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದವರ ನೀಚತನ ಮತ್ತು ಅಪ್ರಾಮಾಣಿಕತೆಗಳು ಎದ್ದು ಕಾಣುವಂತಿವೆ ಇಂದಿರಾ ಜೊತೆಗಿದ್ದವರು ಅವರನ್ನು ಎಡಬಿಡದೆ ಹಿಂಬಾಲಿಸುವ ಅವರ ಸಹಾಯಕ ಆರ್.ಕೆ. ಧವನ್, ಶಾರದಾ ಪ್ರಸಾದ್, ಜಿ. ಪಾರ್ಥಸಾರಥಿ ಇವರುಗಳು. ಆದರೆ ಗುಂಡಿನ ದಾಳಿ ಆರಂಭವಾದಾಗ ಇಂದಿರಾ ಗಾಂಧಿಯವರನ್ನು ಬದಿಗೆ ತಳ್ಳಿ ಅಥವಾ ಅವರ ಎದುರು ಗುಂಡಿಗೆ ಅಡ್ಡವಾಗಿ ತಮ್ಮನ್ನೇ ಒಡ್ಡಿ ತಮ್ಮ ನಾಯಕಿಯನ್ನು ಇವರ್ಯಾರಾದರೂ ಉಳಿಸ ಬಹುದಿತ್ತು. ಆದರೆ "ನಾಜೂಕಾದ ಭಾಷೆಯ ಬಲದಿಂದ ಇಂದಿರಾ ಗಾಂಧಿಯವರ ಔದಾರ್ಯದ ರಕ್ತ ಹೀರುತ್ತಾ ಬಂದಿರುವ ಈ ತಿಗಣೆಗಳು ತಮ್ಮ ಜೀವ ಉಳಿಸಿಕೊಳ್ಳಲು ಓಡಿ ಹೋದವು" ಎನ್ನುತ್ತಾರೆ ವಡ್ಡರ್ಸೆ.

ಗುಂಡಿನ ಮಳೆಯ ಆಘಾತಕ್ಕೆ ಕುಸಿದು ಬಿದ್ದ ಇಂದಿರಾರನ್ನು ಮನೆಯೊಳಗಿಂದ ಓಡಿ ಬಂದ ಸೋನಿಯಾ ಗಾಂಧಿ ಮತ್ತು ಅವರ ಸಹಾಯಕ ಎತ್ತಿ ಕಾರಿನಲ್ಲಿಟ್ಟುಕೊಂಡು ಸುಸಜ್ಜಿತವಾದ ಅಖಿಲ ಭಾರತ ವೈದ್ಯ ವಿಜ್ಞಾನ ಸಂಸ್ಥೆ ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿ ಆಕೆಯ ಪರಿಚಯವಿಲ್ಲದ್ದರಿಂದ, ಸಿಬ್ಬಂದಿ ಮೊದಲಿಗೆ ಯಾವ ವಿಶೇಷ ಮುತುವರ್ಜಿಯನ್ನೂ ತೋರಿಸದೆ ತಮ್ಮ ಎಂದಿನ ಜಡ್ಡುಗಟ್ಟಿದ ಶೈಲಿಯಲ್ಲೇ ನಿಧಾನ ಮಾಡಿದ್ದರಿಂದ ತುರ್ತಾಗಿ ವಿಶೇಷ ಚಿಕಿತ್ಸೆ ದೊರೆಯಲಿಲ್ಲ. ಗುಂಡು ತಾಗಿದಾಗಿಂದ ಆಸ್ಪತ್ರೆ ತಲುಪಲು ೨೫ ನಿಮಿಷ, ನಂತರ ವಿಶೇಷ ಶಸ್ತ್ರ ಚಿಕಿತ್ಸೆ ವಿಭಾಗಕ್ಕೆ ಸಾಗಿಸುವವರೆಗೆ ೧೫ ನಿಮಿಷ ಒಟ್ಟು ೪೦ ನಿಮಿಷಕ್ಕೂ ಹೆಚ್ಚು ಸಮಯ ಹಿಡಿಸಿತು.

ವೈದ್ಯರು ಎಷ್ಟು ಪ್ರಯತ್ನಿಸಿದ್ದರೂ ಇಂದಿರಾ ಬಹುಶಃ ಉಳಿಯುತ್ತಿರಲಿಲ್ಲ. ಆದರೆ, ಅವರ ನಿವಾಸದಲ್ಲಿ ಎಲ್ಲಾ ಅತ್ಯಾಧುನಿಕ ಸಂಪರ್ಕ ವ್ಯವಸ್ಥೆಯಿದ್ದೂ ಸಹ ಯಾರೂ ವಿಷಯವನ್ನು ಆಸ್ಪತ್ರೆಗೆ ತಿಳಿಸಿ ಅಲ್ಲಿ ಎಲ್ಲ ಸಿದ್ಧವಾಗಿರುವಂತೆ ವ್ಯವಸ್ಥೆ ಮಾಡಲಿಲ್ಲವೆಂಬುದು ಇಂದಿರಾ ಸುತ್ತ ಇದ್ದ ಉನ್ನತ ವ್ಯಕ್ತಿಗಳ ಯೋಗ್ಯತೆಯ ಕಡೆ ಬೆರಳುಮಾಡುತ್ತದೆ

ಇದಕ್ಕೆ ಜನ ಕೊಟ್ಟ ಒಂದೇ ವಿವರಣೆ: 'ಇಂದಿರಾ ತಮ್ಮ ಸುತ್ತ ಭಟ್ಟಂಗಿಗಳನ್ನು ಕಟ್ಟಿಕೊಂಡು ಕೆಟ್ಟರು.'

ಕೈವಾಡಗಳು ?

ಇಂದಿರಾ ಗಾಂಧಿಯವರ ಹತ್ಯೆಯಲ್ಲಿ ಯಾರ್ಯಾರ ಕೈವಾಡವಿದೆ ಎಂಬ ಬಗ್ಗೆ ಬೇಕಾದಷ್ಟು ಅನುಮಾನಕ್ಕೆ ಅವಕಾಶಗಳಿವೆ. ಎಲ್ಲದಕ್ಕಿಂತ ಮೊದಲನೆಯದು ಟಿ.ವಿ. ಚಿತ್ರ ತಯಾರಕ ಪೀಟರ್ ಉಸ್ತಿನೋವ್ ಅವರ ಹೇಳಿಕೆಗಳು ಮತ್ತು ನಡವಳಿಕೆಗಳು. ಮೊದಲು ಇವರು, ಹತ್ಯೆಯ ಎಲ್ಲ ವಿವರಗಳನ್ನು ತಮ್ಮ ತಂಡ ಸೆರೆ ಹಿಡಿದಿದ್ದಾಗಿ ಹೇಳಿದ್ದರಂತೆ ಮಾರನೇ ದಿನ ಅವರು ಅದನ್ನು ಅಲ್ಲಗಳೆದರು. ವಾಸ್ತವವಾಗಿ, ಕಚೇರಿಗೆ ಬರುತ್ತಿದ್ದ ಇಂದಿರಾಗೆ ಎದುರಾದ ಅಂಗರಕ್ಷರು ಸೆಲ್ಯೂಟ್ ಮಾಡುವ ವರೆಗಿನ ವಿವರಗಳೆಲ್ಲ ಚಿತ್ರಿತವಾಗಿದ್ದು ಭಾರತೀಯ ದೂರದರ್ಶನದಲ್ಲೂ ಪ್ರಸಾರವಾಗಿದೆ. ಅನಂತರದ ವಿವರಗಳೂ ಚಿತ್ರಿತ ವಾಗಿರಲೇ ಬೇಕು. ಆದರೆ ಈಗ ಉಸ್ತಿನೋವ್ ತಾನು ಅದನ್ನೆಲ್ಲ ಚಿತ್ರಿಸಲೇ ಇಲ್ಲವೆನ್ನಲು ಕಾರಣವೇನು ಎಂಬುದು ದೊಡ್ಡ ಒಗಟಾಗುತ್ತದೆ.

ರಷ್ಯದ ಸುದ್ದಿ ಸಂಸ್ಥೆ 'ತಾಸ್' ತನ್ನ ಮಾಮೂಲೀ ಧಾಟಿಯಲ್ಲಿ, ಈ ಹತ್ಯೆ ಅಮೆರಿಕದ ಸಿ.ಐ.ಎ. ಕೈವಾಡವೆಂದು ಆಪಾದಿಸಿದೆ. ಅಮೇರಿಕ ಅಲ್ಲಗಳೆದಿದೆ. ಆದರೆ, ಹತ್ಯೆಯ ಸಂಚಿನಲ್ಲಿ ಇಷ್ಟೇ ಅಲ್ಲ, ಇಂದಿರಾ ಅವರ ಆಪ್ತರುಗಳಲ್ಲೇ ಯಾರ್ಯಾರೆಲ್ಲ ಸೇರಿದ್ದಾರೋ ಎಂಬಲ್ಲಿ ವರೆಗೂ ಅನುಮಾನ ಪಡುವಂಥ ಪರಿಸ್ಥಿತಿಯಿದೆ.

ಈ ಬಗ್ಗೆ ಅತ್ಯುನ್ನತ ಮಟ್ಟದ ವಿಶೇಷವಾದ ತನಿಖೆಯೇನೋ ನಡೆಯಲಿದೆ, (ಸುಪ್ರೀಂಕೋರ್ಟ್ ನ್ಯಾಯಾಧೀಶ ಎಂ. ಪಿ. ಠಕ್ಕರ್ ಅವರ ನೇತೃತ್ವದಲ್ಲಿ) ಆದರೆ ಇಷ್ಟು ದೊಡ್ಡ ದೇಶದ ಇಷ್ಟು ಬಲಿಷ್ಠ ನಾಯಕಿಯನ್ನು ಇಷ್ಟು ಸುಲಭದಲ್ಲಿ ಕೊಲ್ಲಲಾಯಿತೆಂದರೆ, ನಮ್ಮ ಪಡೆಗಳ ರಕ್ಷಣಾ ಸಾಮರ್ಥ್ಯದಲ್ಲೇ ವಿಶ್ವಾಸ ಕಳೆದು ಹೋಗುವಂಥ ಪರಿಸ್ಥಿತಿ. "ಸರ್ವಧರ್ಮ ಸಹಿಷ್ಣು ...ಯ ಸೋಗಿನಲ್ಲಿ ಮೆರೆದಾಡುತ್ತಿರುವ ಧರ್ಮ... ದುರಭಿಮಾನಕ್ಕೆ ಈ ಕೃತ್ಯ ಕನ್ನಡಿ ಹಿಡಿ...ದೆಯಲ್ಲದೆ, 'ಬಹುತೇಕ ಭಾರತೀಯರ... ಮೂಲತಃ ಅಪ್ರಾಮಾಣಿಕರು ಮತ್ತು... ಆತ್ಮವಂಚಕರು' ಎಂಬ ಆಪಾದನೆಗೆ ಸಮ...ರ್ಥನೆ ಒದಗಿಸಿದೆ. ಅಂತರ್ವಾಹಿನಿಯಾ... ಈ ದೇಶದ ಎಲ್ಲ ದೌರ್ಬಲ್ಯಗಳು ಈ ಕೃತ್...ದಲ್ಲಿ ಉಮ್ಮಳಿಸಿವೆ...."

ಸಿಖ್ಖರ ನರಮೇಧ

ಇನ್ನು, ಇಂದಿರಾ ಹತ್ಯೆಗೆ ಪ್ರತೀಕಾ...ರೂಪದಲ್ಲಿ ಸಿಖ್ಖರ ಮೇಲೆ ನಡೆದ ನರಮೇ...ಧದ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್ ಬಹ... ವಿವರವಾದ ವರದಿ-ವಿವೇಚನೆಗಳನ್ನು ಪ್ರ...ಟಿಸಿದೆ. ಮೇಲು ನೋಟಕ್ಕೆ ಇದೊಂದ... ಕೋಮು ಗಲಭೆ, ಸಹಜ ಕೋಪದ ಸ್ಫೋ...ಟ ಎನ್ನಿಸಿದರೂ ಅದು ಅಷ್ಟೇ ಅಲ್ಲ, ಅದ... ಹಿಂದೆ, ಈ ದೇಶದ ಅಸಮಾನತೆಗಳು... ಮುಖ್ಯವಾಗಿ ಆರ್ಥಿಕ ಅಸಮಾನತೆ- ಮೂ...ಲಭೂತವಾಗಿ ಪರಿಣಾಮ ಬೀರಿವೆ ಎಂಬ...ದು ಅಲ್ಲಿ ವ್ಯಕ್ತವಾಗಿದೆ. ಜೊತೆಗೆ ದೊಂ...ಯ ಅವಕಾಶಕ್ಕಾಗಿ ಕಾಯುವ ಗೂಂಡಾ...ಗಳು, ಹಾಗೂ ರಾಜಕಾರಣಿ ಮತ್ತು ಪೊ...ಲೀಸರ ಪಾತ್ರ ಅಥವಾ ವರ್ತನೆಗಳೂ ವಿಶೇ...ಷವಾಗಿ ಗಮನಾರ್ಹವಾಗಿವೆ.


ಆರ್ಥಿಕ ಅಸಮತೆ

ಗ್ರಾಮೀಣ ಬದುಕಿನ ಏಳಿಗೆಗೆ ಕ್ರ...

(೩ನೇ ಪುಟಕ್ಕೆ)

ರಾಷ್ಟ್ರೀಯ ಕಲಾ ರಂಗಕ್ಕೆ ಮಲೆನಾಡ ಬಳುವಳಿ:

ಚಿತ್ರ ಕಲಾವಿದ ವಿ. ಆರ್. ಸಿ. ಶೇಖರ



ಕನ್ನಡ ಪತ್ರಿಕೆಗಳನ್ನು ಓದುವ ಅಭ್ಯಾಸವಿರುವವರಲ್ಲಿ ವಿ. ಆರ್. ಸಿ. ಶೇಖರ್ ಅವರ ವ್ಯಂಗ್ಯ ಚಿತ್ರಗಳನ್ನು ನೋಡದವರಿದ್ದರೆ ಅದೊಂದು ಆಶ್ಚರ್ಯವೇ. ಆದರೆ ಶೇಖರ್ ನಮ್ಮ ಈ ಶೃಂಗೇರಿ ಮೂಲೆಯವರು ಎಂಬುದು ಮಾತ್ರ ಹೆಚ್ಚು ಜನರಿಗೆ ಗೊತ್ತಿರಲಿಕ್ಕಿಲ್ಲ.

ಶೃಂಗೇರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಹಿಂದಿ ಪಂಡಿತರಾಗಿ ನಿವೃತ್ತರಾಗಿರುವ, ಇಡೀ ವಿದ್ಯಾರ್ಥಿ ಸಮೂಹದ ಅಚ್ಚು ಮೆಚ್ಚಿನ ವ್ಯಕ್ತಿಯಾದ ವಿ. ರಾಮಕೃಷ್ಣ ಭಟ್ಟರು ಶೇಖರ್ ಅವರ ತಂದೆ. ಶಾಲೆ ಕಾಲೇಜು ವಿದ್ಯಾಭ್ಯಾಸದಲ್ಲಿ ಅಷ್ಟೇನೂ ಆಸಕ್ತಿ ಕಾಣದ ಶೇಖರ್, ಅನಂತರ ದಾವಣಗೆರೆಯ ಸರ್ಕಾರಿ ಕಲಾ ಶಾಲೆ ಹಾಗೂ ಬೆಂಗಳೂರಿನ ಆಚಾರ್ಯ ಚಿತ್ರಕಲಾ ಭವನ - ಇಲ್ಲಿ ಚಿತ್ರಕಲೆ ಅಭ್ಯಾಸ ಮಾಡಿ, ತಮ್ಮ ಪ್ರಕೃತಿದತ್ತ ಪ್ರತಿಭೆ ಅರಳಲು ದಾರಿ ಕಂಡು ಕೊಂಡರು

ಭಾಗವಹಿಸಿದ ಕಲಾಮೇಳಗಳು


ಶೇಖರ್ ಬರಿಯ ವ್ಯಂಗ್ಯ ಚಿತ್ರಕಾರರಲ್ಲ, ಒಬ್ಬ ರಾಷ್ಟ್ರೀಯ ಮಟ್ಟದ ಖ್ಯಾತಿಯ ಚಿತ್ರಕಲಾವಿದರೂ ಹೌದು. ಇವರು ಭಾಗವಹಿಸಿದ ಕಲಾ ಮೇಳಗಳ ಪಟ್ಟಿ ಬಹಳ ದೀರ್ಘವಾಗಿದೆ.

ಕರ್ನಾಟಕ ಲಲಿತ ಕಲಾ ಅಕಾಡೆಮಿಯ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾ ಪ್ರದರ್ಶನಗಳು, ಪ್ರಾದೇಶಿಕ ಮತ್ತು ಕೇಂದ್ರೀಯ ಲಲಿತ ಕಲಾ ಅಕಾಡೆಮಿಗಳ ವಿವಿಧ ಕಲಾ ಮೇಳ ಮತ್ತು ಪ್ರದರ್ಶನಗಳು, ಚಂದೀಗಢದ ಕಲಾ ಕಾಲೇಜಿನ ಸರ್ಕಾರಿ ಮ್ಯೂಸಿಯಮ್‌ನಲ್ಲಿ ನಡೆದ ಕಲಾ ಪ್ರದರ್ಶನಗಳು ಮುಂತಾಗಿ ಲೆಕ್ಕವಿಲ್ಲದಷ್ಟು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ, ಭಾಗವಹಿಸುತ್ತಿದ್ದಾರೆ.

ಕರ್ನಾಟಕ ಲಲಿತ ಕಲಾ ಅಕ್ಯಾಡೆಮಿ ಏರ್ಪಡಿಸಿದ್ದ, ಹಿರಿಯೂರಿನ ತಿರುಮಲೇಶ್ವರ ದೇವಾಲಯದ ಅಪೂರ್ವ ಜಲವರ್ಣದ ಭಿತ್ತಿ ಚಿತ್ರಗಳ ಯಥಾಪ್ರತಿ ತಯಾರಿಸುವ ಕಾರ್ಯದಲ್ಲೂ ಶೇಖರ್ ಭಾಗವಹಿಸಿದ್ದರು.

ಪ್ರಶಸ್ತಿಗಳು

ಶೇಖರ್ ಪಡೆದಿರುವ ಪ್ರಶಸ್ತಿಗಳ ಮಾಲೆಯೂ ದೀರ್ಘವಾದುದು. ದೆಹಲಿಯಲ್ಲಿ ನ



ಡೆದ ೫೦ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (೧೯೭೮), ವಸ್ತು ಸಂಗ್ರಹಾಲಯಗಳ ಇಲಾಖೆಯ ವಾರ್ಷಿಕ ಕಲಾ ಪ್ರದರ್ಶನಗಳು, ಮೈಸೂರು ದಸರಾ ಕೈಗಾರಿಕಾ ಮತ್ತು ಸಾಂಸ್ಕೃತಿಕ ಪ್ರದರ್ಶನ (೭೫,೭೭) ಭಾರತೀಯ ಲಲಿತ ಕಲಾ ಅಕಾಡೆಮಿ (೮೨) ಮುಂತಾದ ಕಡೆ ಇವರು ಪ್ರಶಸ್ತಿಗಳನ್ನು ಗಳಿಸಿದ್ದಾರೆ.

ಏಕವ್ಯಕ್ತಿ ಪ್ರದರ್ಶನಗಳು

ಕಲಾ ಗುರು ಆರ್ಟ್‌ಗ್ಯಾಲರಿ, ದಾವಣಗೆರೆ (೧೯೭೭), ಚಿತ್ರ ಕಲಾ ಪರಿಷದ್, ಬೆಂಗಳೂರು (೭೯), ರಾಮನೀಲ್ ಆರ್ಟ್ ಗ್ಯಾಲರಿ, ಬೆಂಗಳೂರು(೮೦), ಲಲಿತ ಕಲಾ ಗ್ಯಾಲರಿ, ಪ್ರಾದೇಶಿಕ ಕೇಂದ್ರ, ಮದ್ರಾಸ್ (೮೧), ಜಹಾಂಗೀರ್ ಆರ್ಟ್ ಗ್ಯಾಲರಿ ಮುಂಬಯಿ (೮೧), ಕಲಾ ಮೇಳ, ಹೊಸ ದಿಲ್ಲಿ (೮೨) ಇಲ್ಲೆಲ್ಲ ಶೇಖರ್ ಅವರ ಏಕ ವ್ಯಕ್ತಿ ಕಲಾ ಪ್ರದರ್ಶನಗಳು ನಡೆದಿವೆ.

ಸಂಗ್ರಹ

ಶೇಖರ್ ಅವರ ಚಿತ್ರ ಕಲಾ ಕೃತಿ... ಮತ್ತು ಶಿಲ್ಪಗಳು ಕೇಂದ್ರೀಯ ವ... ರಾಜ್ಯ ಲಲಿತ ಕಲಾ ಅಕೇಡೆಮಿಗಳು, ...ಜ್ಯದ ವಸ್ತು ಸಂಗ್ರಹಾಲಯಗಳ ಇಲಾ... ದಾವಣಗೆರೆಯ ಸರ್ಕಾರಿ ಕಲಾ ಶಾಲೆ, ...ಲಿಯ ವಿದೇಶಾಂಗ ವ್ಯವಹಾರಗಳ ...ಲಯ-ಮುಂತಾದ ಕಡೆಗಳಲ್ಲಿ ಸಂಗ್ರ...ಲ್ಲಿವೆ. ಹಲವಾರು ಕಲಾ ಪ್ರೇಮಿಗಳೂ ... ಕಲಾ ಕೃತಿಗಳನ್ನು ಕೊಂಡಿದ್ದಾರೆ.

ಇಷ್ಟೆಲ್ಲ ಮಹತ್ವದ ಸಾಧನೆಗಳನ್ನು ...ಡಿರುವ, ಕೇವಲ ೩೧ ರ ಪ್ರಾಯದ ಶೇ... ಈಗ ಬೆಂಗಳೂರಿನ ರಚನಾ ಅಡ್ವರ್ಟೈ...ಗ್ ನಲ್ಲಿ ಉದ್ಯೋಗದಲ್ಲಿದ್ದಾರೆ.

ಅವರ ಸುಮಾರು ೩೦ ಸಾವಿರಕ್... ಹೆಚ್ಚು ವ್ಯಂಗ್ಯ ಚಿತ್ರಗಳು ಕನ್... ಎಲ್ಲಾ ಪ್ರಮುಖ ಪತ್ರಿಕೆ- ನಿಯತ ... ಕಗಳಲ್ಲೂ ಪ್ರಕಟವಾಗಿವೆ.

ಅವರ ವಿಳಾಸ: ಶ್ರೀ ವಿ. ಆರ್... ಶೇಖರ್, ೧೮೪, ೪ ನೇ ಕ್ರಾಸ್, ೧೧... ಮೆಯಿನ್, ಹನುಮಂತ ನಗರ, ಬೆಂಗ...ರು-೧೯.

(೨ನೇ ಪುಟದಿಂದ)

ಬದ್ಧವಾದ ಸಮಗ್ರ ಯೋಜನೆಯಿಲ್ಲದೆ, ರಾಷ್ಟ್ರೀಯವಾಗಿ ಸಮತೋಲಿತವಾದ ಆರ್ಥಿಕ ಬೆಳವಣಿಗೆಯಿಲ್ಲದೆ ಇಂದು ಹಳ್ಳಿಗರ ಬಾಳು ದುಸ್ತರವಾಗಿ ದಿನಂಪ್ರತಿ ಸಾವಿರಗಟ್ಟಲೆ ಜನ ಜೀವನೋಪಾಯ ಹುಡುಕಿಕೊಂಡು ನಗರಗಳನ್ನು ಸೇರುತ್ತಿದ್ದಾರೆ. ಇವರಿಗೆ ಸಿನಿಮಾಗಳು ಬೇರೆ ನಗರದ ವೈಭವಗಳನ್ನು ಮಾತ್ರ ಎತ್ತಿ ತೋರಿಸುತ್ತ, ಅಲ್ಲಿನ ದಿನವಹಿ ವಾಸ್ತವಿಕ ಸಮಸ್ಯೆಗಳನ್ನು ಮನದಟ್ಟು ಮಾಡದೆ ಭ್ರಮೆಯನ್ನು ಸೃಷ್ಟಿಸುತ್ತಿವೆ. ಆದರೆ ಹೀಗೆ ನಗರಸೇರಿದ ಅಪಾರ ಜನ ಅಲ್ಲಿ ಒಂದು ಹೊತ್ತಿನ ಕೂಳಿಗೂ ಪಡಬೇಕಾದ ಪಾಡು ಮತ್ತಿತರ ಅನ್ಯಾಯ ಶೋಷಣೆಗಳನ್ನು ಅನುಭವಿಸಬೇಕಾಗುತ್ತದೆ. ಅದರ ಜೊತೆ ಜೊತೆಯಲ್ಲೇ ಅವರ ಕಣ್ಣೆದುರು ವೈಭವದ ಜೀವನ ಒಂದು ಕಡೆ; ಅಂಥದನ್ನು ತಾವೂ ಅನುಭವಿಸಬೇಕೆಂಬ ತುಡಿತ; ಆದರೆ ಯಾವುದೇ ನ್ಯಾಯವಾದ ಮಾರ್ಗದಿಂದ ಅದನ್ನು ಪಡೆಯಲಾರದ ಪರಿಸ್ಥಿತಿ; ಜೊತೆಗೆ ಹಲವು ಅಡ್ಡ 'ದಾರಿ'ಗಳಿಂದ ಅಂಥ ಸುಖವನ್ನು ತಕ್ಕಮಟ್ಟಿಗಾದರೂ ಗಳಿಸುವ ಹಲವರ ನಿದರ್ಶನ ಇನ್ನೊಂದೆಡೆ – ಈ ಎಲ್ಲದರ ಮಧ್ಯೆ, ನೆಲೆಗೆಟ್ಟ, ನಿರ್ದಿಷ್ಟ ದುಡಿಮೆ–ಆದಾಯಗಳಿಲ್ಲದ ಈ ಜನ (ಲುಂಪನ್ ಪ್ರೊಲೆಟೇರಿಯಟ್) ದಿಕ್ಕೆಟ್ಟು ಹತಾಶರಾಗಿರುತ್ತಾರೆ. ಇಂಥವರು ಸ್ವಲ್ಪದರಲ್ಲೇ ಸಿಡಿಯುವ ಸಿಡಿಮದ್ದಾಗಿ ರಾಜಕಾರಣಿಗಳ – ಗೂಂಡಾಗಳ ಚಿತಾವಣೆಗೆ ಸುಲಭವಾಗಿ ಬಲಿಯಾಗುತ್ತಾರೆ ಎಂದು ಅಧ್ಯಯನಗಳು ಹೇಳುತ್ತವೆ. ಇಂಥ ಅಸಂಖ್ಯಾತ ಜನ ಸಮೂಹವೇ ಉತ್ತರಭಾರತದ ದೊಂಬಿಗಳಲ್ಲಿ ಮುಖ್ಯ 'ಶಕ್ತಿ' ಯಾಗಿತ್ತೆಂಬುದು ವರದಿಗಳ ಪ್ರಧಾನ ಅಂಶ.

ಇಂದಿರಾ ಹತ್ಯೆ, ಸಿಖ್ಖರ ನರಮೇಧ: ಒಂದು ಹಿನ್ನೋಟ
ರಾಜಕಾರಣಿಗಳು, ಪೋಲೀಸರು....

ಗೂಂಡಾ – ರಾಜಕಾರಣಿ – ಪೋಲೀಸ್

ಈ ಜನ ವರ್ಗ ದೊಂಬಿಗಳ ಮುಖ್ಯ 'ಶಕ್ತಿ'ಯಾದರೂ, ಈ ಸಂದರ್ಭದಲ್ಲೇ ಆಗಲಿ, ಅಥವಾ ಭಿವಂಡಿ-ಮುಂಬೈ ಗಲಭೆಗಳಂಥ ಹಿಂದಿನ ಯಾವ ಸಂದರ್ಭದಲ್ಲೇ ಆಗಲಿ, ದೊಂಬಿ-ಗಲಭೆಗಳನ್ನು ನಿಯಂತ್ರಿಸುವುದು- ನಿರ್ದೇಶಿಸುವುದು ಗೂಂಡಾಗಳು ಮತ್ತು ರಾಜಕಾರಣಿಗಳು ಎಂಬುದು ಎದ್ದು ಕಾಣುವ ಒಂದು ಅಪಾಯಕರ ಸನ್ನಿವೇಶ. ಈ ಘಟನಾವಳಿಗಳ ಬಗ್ಗೆ ವಿಶ್ಲೇಷಿಸಿರುವ ಬಹುಪಾಲು ಎಲ್ಲ ಬರಹಗಳೂ ಈ ಅಂಶವನ್ನು ಗುರುತಿಸಿ ಎತ್ತಿ ಹೇಳಿವೆ.

ಜೊತೆಗೆ, ಈ ಗಲಭೆಗಳ ಸಂದರ್ಭದಲ್ಲಿ ಪೋಲೀಸರ ನಿಷ್ಕ್ರಿಯತೆ ಅಥವಾ ರಾಜಕೀಯ ಒತ್ತಡದ ಎದುರು ಅವರ 'ನಿರುಪಯುಕ್ತತೆ'ಯ ಬಗೆಗೂ ಸಾಕಷ್ಟು ಹೇಳಲಾಗುತ್ತಿದೆ.

ಹೀಗೆ, ಲೂಟಿಮಾಡುವ ಎಲ್ಲ ಅವಕಾಶಗಳನ್ನೂ ಬಳಸಿಕೊಳ್ಳುತ್ತ ಅದರಿಂದಲೇ 'ದರ್ಬಾರು' ಜೀವನ ನಡೆಸುವ ಗೂಂಡಾಗಳು, ಈ ಗೂಂಡಾಗಳನ್ನೇ ತಮ್ಮ ಬಲಗೈಯಾಗಿ ಇಟ್ಟುಕೊಂಡಿರುವ ಹಲವು ರಾಜಕಾರಣಿಗಳು ಎಲ್ಲ ಪ್ರಮುಖ ದೊಂಬಿಗಳ ಸೂತ್ರಧಾರರೂ ಕಾರಣಕರ್ತರೂ ಆಗಿರುತ್ತಾರೆಂಬುದು ಈ ಸಲದ ಗಲಭೆಗಲ್ಲಿ ಅತ್ಯಂತ ಸ್ಪಷ್ಟವಾಗಿ ಕಂಡಿದೆ.

ಕಾಂಗ್ರೆ

ಉದಾಹರಣೆಗೆ, ಕಾಂಗ್ರೆಸ್ (ಐ) ನ ಸ್ಥಳೀಯ ಕಾರ್ಯಕರ್ತರು ಮತ್ತು ಕೌನ್ಸಿಲರ್‌ಗಳಿಂದ ಹಿಡಿದು ಕೆಲವು ಸಂಸತ್ ಸದಸ್ಯರವರೆಗೆ ಹಲವಾರು ಪುಡಾರಿಗಳು ಈ ದೊಂಬಿನಿರತ ಜನ ಸಮೂಹಗಳ ಮುಂದಾಳತ್ವ ವಹಿಸಿದ್ದುದು ಹಾಗೂ ಪೋಲೀಸ್ ಠಾಣೆಗಳಲ್ಲಿ ಕುಳಿತು ಪೋಲೀಸರು ಕ್ರಮ ಕೈಗೊಳ್ಳದಂತೆ ತಡೆಯುತ್ತಿದ್ದುದು ವರದಿಯಾಗಿದೆ. ಕೆಲವೆಡೆ ಭಾಜಪಾದಂಥ ಕೆಲವು ವಿರೋಧ ಪಕ್ಷಗಳ ಕಾರ್ಯಕರ್ತರೂ ಹಿಂಸೆಯಲ್ಲಿ ಶಾಮೀಲಾಗಿದ್ದುದನ್ನು ಸಂತ್ರಸ್ತರು ಉದಹರಿಸಿದ್ದಾರೆ. (ಇಂಡಿಯನ್ ಎಕ್ಸ್‌ಪ್ರೆಸ್ ೧೨–೧೧–'೮೪.)

ಇನ್ನೂ ಆಶ್ಚರ್ಯವೆಂದರೆ, 'ಹೀಗೆ ಲೂಟಿ ಮಾಡುವುದು ಜನಗಳ ಹಕ್ಕು' ಎಂದು ಸಮರ್ಥಿಸಿಕೊಂಡು, ಅವರುಗಳ ಮೇಲೆ ಕ್ರಮ ಕೈಗೊಳ್ಳಬಾರದೆಂದು ವಾದಿಸಿದ ಒಬ್ಬ ಕಾಂಗ್ರೆ ಎಂಪಿಯ ಬಗೆಗೂ ವರದಿಯಾಗಿದೆ.

ಹಿಂದುಗಳಿಂದ ರಕ್ಷಣೆ

'ಈ ಗಲಭೆಗಳು ನಿಜವಾಗಿ ಹಿಂದು-ಸಿಖ್ ಗಲಭೆಗಳಲ್ಲ, ಇವು ಗೂಂಡಾ–ಸಿಖ್ ಗಲಭೆಗಳು' ಎಂದು ಸಂತ್ರಸ್ತರು ಘೋಷಿಸುತ್ತಾರೆ. ಕೋಪೋದ್ರಿಕ್ತರಾದ ಜನ ಸಮೂಹಗಳ ಎದುರು, ಸಾಧ್ಯವಿದ್ದಲ್ಲೆಲ್ಲ ಹಿಂದುಗಳು ಸಿಖ್ಖರನ್ನು ತಮ್ಮ ಪ್ರಾಣದ ಹಂಗು ತೊರೆದು ರಕ್ಷಿಸಿದ್ದಾರೆ. ದೆಹಲಿಯಲ್ಲಿ ಮೂರ್ನಾಲ್ಕು ದಿನ ಇಡೀ ಪೋಲೀಸ್ ವ್ಯವಸ್ಥೆ ಕುಸಿದಿದ್ದಾಗ, ಎಷ್ಟೋ ಕಡೆ ವಿದ್ಯಾರ್ಥಿಗಳು, ವೈದ್ಯರು, ವಕೀಲರು, ನಿವೃತ್ತ ಸೈನ್ಯಾಧಿಕಾರಿಗಳು, ಸರ್ಕಾರಿ ನೌಕರರು, ಮುಂತಾದ ಜನ ಸಾಮಾನ್ಯರು ಸ್ವಯಂ ಸೇವಕ ತಂಡಗಳನ್ನು ರಚಿಸಿಕೊಂಡು ಹಿಂಸೆ ಲೂಟಿಗಳನ್ನು ಆದಷ್ಟೂ ನಿಯಂತ್ರಿಸಿದರು. ನೂರಾರು ಜನ ಹಿಂದೂ ಮಹಿಳೆಯರು ತಮ್ಮ ಸಿಖ್ ಸೋದರಿಯರನ್ನು ರಕ್ಷಿಸುವಲ್ಲಿ ತೋರಿದ ಸಹೃದಯತೆ ಮತ್ತು ಸ್ಥೈರ್ಯ ಅನೋಘವಾದುದು.

ಪಾಠ ಕಲಿಯಬೇಕಾಗಿದೆ

ಅಂತೂ ಈ ಘಟನಾವಳಿಗಳು ಈ ದೇಶದ ಚರಿತ್ರೆಯಲ್ಲಿ ಅಳಿಸಲಾಗದ ಒಂದು ಕಪ್ಪು ಕಲೆಯಾಗಿರುವಂತೆಯೇ, ಎಲ್ಲ ಪ್ರತಿಕೂಲ ಪರಿಸ್ಥಿತಿಗಳ ಎದುರಲ್ಲೂ ನಮ್ಮ ಜನರ ಅಪಾರ ಇಚ್ಛಾ ಶಕ್ತಿಯ ಹಾಗೂ ಒಳ್ಳೆಯದಕ್ಕಾಗಿ ಹಾತೊರೆಯುವ ಸ್ವಭಾವದ ಹೆಗ್ಗುರುತೂ ಆಗಿವೆ. ಜೊತೆಗೇ, ಈ ದೇಶದ ಅಧಿಕಾರಶಾಹಿ, ಪೋಲೀಸ್ ಮತ್ತು ರಾಜಕಾರಣಿಗಳ ಬಗೆಗೂ ಅತ್ಯಂತ ಮೂಲಭೂತವಾದ ಪ್ರಶ್ನೆಗಳನ್ನು ಮತ್ತು ದೋಷಗಳನ್ನು ಎತ್ತಿ ತೋರಿಸಿವೆ.

ಈ ಎರಡೂ ತರದ– ಒಳಿತು ಮತ್ತು ಕೆಡುಕಿನ – ಅಂಶಗಳಲ್ಲಿ ಅಡಕವಾಗಿರುವ ಪಾಠಗಳನ್ನು ಗ್ರಹಿಸಿಕೊಂಡು ದೋಷಗಳ ನಿವಾರಣೆಗೆ ಸೂಕ್ತ ಕ್ರಮಗಳನ್ನು ತಕ್ಷಣದಿಂದಲೇ ತೆಗೆದುಕೊಳ್ಳಬೇಕಾಗಿರುವುದು, ಈಗ ದೇಶದ ಮುಂದಿರುವ ಬಹು ದೊಡ್ಡ, ಅತ್ಯಗತ್ಯದ ಜವಾಬ್ದಾರಿ. §§

"ಗುರು"ಗಳ ಸಮಕಾಲೀನ ಜವಾಬ್ದಾರಿ

ನಾವು ಇಂದು ಆಧುನಿಕ ಯುಗದಲ್ಲಿ ವೇಗವಾಗಿ ಸಾಗುತ್ತಿದ್ದೇವೆ. ನಮ್ಮ ದೇಶದ್ಯಂತ ಲಕ್ಷಾಂತರ ಹಿಂದು – ಮುಸ್ಲಿಮ್ – ಕ್ರೈಸ್ತ ಗುರುಗಳು, ದೇವಸ್ಥಾನ ಚರ್ಚ್–ಮಸೀದಿಗಳಿವೆ. ಜನ ಸಮೂಹ ಭಾವದಿಂದ ಗುರು ಸೇವೆ ಮಾಡಿ ಪುಣ್ಯ ಕಟ್ಟಿಕೊಂಡು' (?) ಬರುತ್ತಿದೆ. ರೆ ಇಂದು ಧರ್ಮ, ಜಾತಿ, ಭಾಷೆಗಳ ವಿಷದಲ್ಲಿ ನರಬಲಿ ಆಗುತ್ತಿದೆ. ಜನಸಾಮಾನ್ಯ, ನಿರಪರಾಧಿಗಳ ಆಹುತಿ ದಿನನಿತ್ಯ ನಡೆಯುತ್ತಿದೆ. ಇದನ್ನು ದೇವರ ಪ್ರತಿನಿಧಿಗಳಾಗಿರುವ ಗುರುಗಳು ತಪ್ಪಿಸಲು ಅಸಮರ್ಥರಾಗಿದ್ದಾರೆಯೇ? ಇದಕ್ಕೆ ಅವರ ಕುರಾನ್, ಬೈಬಲ್, ಗೀತೆಗಳಲ್ಲಿ ಅವಕಾಶವಿದೆ?

ಜಾತಿ–ಧರ್ಮ–ದೇವರುಗಳಿಗೂ, ಗುರುಗಳಿಗೂ ನಿಕಟ ಸಂಬಂಧವಿದೆ. ಆದರೆ ಇಂದು ಗುರುಗಳು ತಮ್ಮ ತಮ್ಮ ಧರ್ಮದವರಿಗೆ ಸಂಕುಚಿತ ಧರ್ಮಾಂಧತೆಯನ್ನು ಬೆಳೆಸುವ, ಸಂಕುಚಿತ ದೃಷ್ಟಿಕೋನದಿಂದ ವರ್ತಿಸುತ್ತಿರುವುದು–ಈ ನರಹತ್ಯೆಗಳ ವಿಷಯ ಗಮನಿಸುವವರಿಗೆಲ್ಲ ವೇದ್ಯವಾಗದೇ ಇರದು.

ಜನಸಮೂಹ ಗುರುಗಳನ್ನು ದೇವರ ದಾಸ ಎಂದು ನಂಬಿದೆ. ಆಸೆಯ ಕಣ್ಣಿನ ಭಕ್ತಿಯ ಭಾವನೆಯಿಂದ ನೋಡುತ್ತದೆ. ಆದರೆ ಇದಕ್ಕೆ ತಕ್ಕಂತೆ ಮಾನವೀಯ ಮೌಲ್ಯಗಳನ್ನು ಬೆಳೆಸಲು ಹಾಗೂ ವಿಶ್ವದಲ್ಲಿ ಜನರನ್ನೂ ವಿಶಾಲ ದೃಷ್ಟಿಯಿಂದ ನೋಡಲು ಅವರು ಅಸಮರ್ಥರಾದ ಗುರು ಇಂದಿನ ಆಧುನಿಕ ಜನ ಸಮೂಹಕ್ಕೆ ನಿರರ್ಥಕ.

ಜನರನ್ನು ಜಾಗೃತರನ್ನಾಗಿ ಮಾಡಿ ಇಡೀ ಮಾನವ ಕೋಟಿಯ ಕಲ್ಯಾಣಕ್ಕೆ ಗುರುಗಳು ನೆರವಾಗಬೇಕು. ಆಧುನಿಕ ಜಗತ್ತಿನ ಧಾರ್ಮಿಕ ಸಮಸ್ಯೆಗಳಿಗೆ ಮಾರ್ಗದರ್ಶಿಗಳಾಗಬೇಕು. ಸ್ವಾಮಿ ವಿವೇಕಾನಂದರಂತೆ, ಅರ್ಥಹೀನ ಇತಿ-ಮಿತಿಗಳ, ಅಪ್ರಸ್ತುತ ಮೌಲ್ಯಗಳ ಲಕ್ಷ್ಮಣ ರೇಖೆಯನ್ನು ದಾಟಿ ಬರಬೇಕು. ಮಾನವೀಯ ಮೌಲ್ಯಗಳು, ಸಹ ಬಾಳ್ವೆ, ವಿಶಾಲ ಮನೋಭಾವಗಳೊಂದಿಗೆ, ಭಾರತ ಋಷಿ ಮುನಿಗಳ ನಾಡು ಮಾತ್ರವಲ್ಲ, ವಿಶ್ವಕಲ್ಯಾಣವನ್ನು ಬಯಸಿದ, ಶಾಂತಿಯ ಮಾರ್ಗದರ್ಶಕವಾಗಿದ್ದ ನಾಡೂ ಹೌದು ಎಂಬ ನಮ್ಮ ಹೆಗ್ಗಳಿಕೆ ಇಂದು ವಾಸ್ತವಕ್ಕಿಳಿಯ ಬೇಕಾಗಿದೆ. ಪುನರ್ ಸ್ಥಾಪನೆ ಯಾಗಬೇಕಾಗಿದೆ.

ಮಿಾಗಾ ಜಗದೀಶ್.

ವೇದಿಕೆ

ಆಸ್ತಿಕ ಯುವಜನ ನಾಸ್ತಿಕರಾಗುವತ್ತ....

ಇಂದು ಜನರಲ್ಲಿ ದೇವರ ಮೇಲಿನ ಭಕ್ತಿ ಕುಗ್ಗದಿದ್ದರೂ ದೇವಸ್ಥಾನಗಳ ಬಗ್ಗೆ ನಂಬಿಕೆ ಕುಗ್ಗಲು ಅಲ್ಲಿನ ಪೂಜಾರಿಗಳ ನಡವಳಿಕೆಯೇ ಕಾರಣ ಎಂದರೆ ತಪ್ಪಲ್ಲ. ಅವರು ಜನರನ್ನು ಕಾಣುವ ರೀತಿ, ಮಾಡುವ ಮಹಾಮಡಿ, ಇವೆಲ್ಲ ಜನರಿಗೆ ಸರಿ ಕಾಣುತ್ತಿಲ್ಲ. ಹಿಂದೆ ತೀರ್ಥ ಪ್ರಸಾದ ಕೊಡುವಾಗ ವಯಸ್ಸಾದ ಹಿರಿಯರಿಗೆ ಮೊದಲು ಕೊಡುತ್ತಿದ್ದರೆ ಈಗ ಬಹುಪಾಲು ಅರ್ಚಕರು ಯಾರು ಶ್ರೀಮಂತರು ಎಂದು ನೋಡಿ ಅವರಿಗೆ ಮೊದಲು ಕೊಡುತ್ತಾರೆ. ಅವರು ದಕ್ಷಿಣೆಕೊಡುತ್ತಾರೆ ಎಂದಲ್ಲ ಅವರವರಲ್ಲಿ 'ವ್ಯವಹಾರ' ಇದೆ ಎಂದಲ್ಲ. ಏನೋ ಒಂದು ರೀತಿಯ ಕುಬ್ಜ ಮನೋಭಾವ. ಅವರನ್ನು ಆ ರೀತಿ 'ಗೌರವ' ದಿಂದ ಕಂಡರೆ ತಮ್ಮ ವ್ಯವಹಾರ ಸುಗಮವಾಗಬಹುದೆಂಬ ಆಸೆ, ಅಷ್ಟೆ.

ಇವರೆಲ್ಲ ನೋಡಿದರೆ ಕೆಲವರ ರಕ್ತ ಕುದಿಯುತ್ತೆ. ಆದರೆ ಅವರು ಅದನ್ನು ಹೇಳುವ ಹಾಗಿಲ್ಲ. ಇನ್ನು, **ದೊಡ್ಡ ದೊಡ್ಡ ಮಠಗಳಲ್ಲಿ ಸ್ವಾಮಿಗಳು.** ಇವರು ಎಲ್ಲ ಬಿಟ್ಟು ಸನ್ಯಾಸಿಗಳಾದವರು, ಆದರೆ ಹಣದ ಆಸೆ ಮಾತ್ರ ಇವರಲ್ಲಿ ತುಂಬಾ ಜಾಸ್ತಿ. ಸಾಧಾರಣ ಮನುಷ್ಯರು ಸ್ವಾಮಿಗಳ ಎದುರಲ್ಲಿ ಅಡ್ಡ ಬಿದ್ದರೆ ಅವರತ್ತ ತಿರುಗಿಯೂ ನೋಡದ. ಆದರೆ ಅದೇ ಒಬ್ಬ ಶ್ರೀಮಂತ ನೋಟಿನ ಕಟ್ಟು ಇಟ್ಟು ಅಡ್ಡ ಬಿದ್ದರೆ ಅವನ ಯೋಗಕ್ಷೇಮ ತುಂಬಾ ವಿಚಾರಿಸಿ ಕೊಳ್ಳುವ ದೃಶ್ಯ ಸರ್ವೇ ಸಾಮಾನ್ಯ.

ಇದನ್ನೆಲ್ಲ ನೋಡಿ ಸಹಿಸಲಾರದ ವಿಚಾರವಂತ ಯುವಜನ ದೇವಸ್ಥಾನಕ್ಕೆ ಹೋಗುವುದನ್ನೇ ಬಿಡುತ್ತಾರೆ. ಅಂದ ಮಾತ್ರಕ್ಕೆ ಅವರೆಲ್ಲ ನಾಸ್ತಿಕರಲ್ಲ. ಇಂಥ ಅರ್ಚಕರು ಮತ್ತು ಸ್ವಾಮಿಗಳಿಂದ ಆಸ್ತಿಕ ವಿಚಾರವಂತ ಯುವ ಪೀಳಿಗೆ ನಾಸ್ತಿಕರಾಗುವುದರಲ್ಲಿ ಸಂಶಯವೇ?

ಹೆಚ್. ವಿ. ನಾಗರಾಜ್,
ಹಾಲ್ಮತ್ತೂರು.

ಅಡಿಕೆ ಬೆಳೆ: ೨ ಸೂಚನೆಗಳು

ಶೃಂಗೇರಿಯಲ್ಲಿ ನಡೆದ ಅಡಿಕೆ ಬೆಳೆ ವಿಚಾರ ಸಂಕಿರಣದ ಬಗೆಗಿನ ನಮ್ಮ ಸಮಾಲೋಚನಾ ವರದಿಯ ಬಗ್ಗೆ ಕೃಷಿ ಇಲಾಖೆಯವರೊಬ್ಬರು ಎರಡು ಸೂಚನೆಗಳನ್ನು ನೀಡಿದ್ದಾರೆ:

೧) ಫ್ಯುರಡಾನ್ ದ್ರಾವಣವನ್ನು ಬಾಳೆಯ ಬುಡಕ್ಕೆ ಹಾಕಬೇಕು, ಎಲೆಯ ಮೇಲಿಂದ ಅಲ್ಲ. ೨) ಅಗತೆಯಿಂದ ಅಡಿಕೆ ಮರದ ಬುಡದ ಮಣ್ಣು ಸಡಿಲಗೊಳ್ಳುತ್ತದೆ ಹಾಗೂ ಹಳೆಯ ದುರ್ಬಲ ಬೇರುಗಳು ಹೋಗಿ ಹೊಸ ಹೊಸ ಬೇರು ಬರಲು ಸಹಾಯವಾಗುತ್ತದೆ. ಇವೆರಡೂ ಮರಗಳಿಗೆ ತುಂಬ ಉಪಯುಕ್ತ. ಅದ್ದರಿಂದ ಅಗತೆ ಅತೀ ಅಗತ್ಯ. 'ಅಗತ್ಯವಿಲ್ಲವೆನ್ನಬಹುದೆ' ಎಂಬ ಪ್ರಶ್ನೆಯೇ ಇಲ್ಲ.

—ಸಂಪಾದಕ

ಸಂಕ್ಷಿಪ್ತ ಸುದ್ದಿ

ದಿ|| ಶ್ರೀಕಂಠ ರಾವ್ ಸ್ಮಾರಕ ಕ್ರೀಡಾ ಕೂಟ

ನ.೧೨ರಂದು ಕಿಗ್ಗದಲ್ಲಿ ನಡೆದ ದಿ|| ಶ್ರೀಕಂಠರಾವ್ ಸ್ಮಾರಕ ಕ್ರೀಡಾಕೂಟದ ಫಲಿತಾಂಶಗಳು: ವಾಲಿಬಾಲ್: ಗಜಾನನ ಕ್ರೀಡಾ ಸಂಘ, ಕಮ್ಮರಡಿ-೧, ಫ್ರೆಂಡ್ಸ್ ಕ್ರೀಡಾ ಕ್ಲಬ್, ನ. ರಾ. ಪುರ-೨; ಬಾಲ್ ಬ್ಯಾಡ್‌ಮಿಂಟನ್- ಶಾರದಾ ಸ್ಪೋರ್ಟ್ಸ್ ಕ್ಲಬ್-'ಬಿ'-೧, ಶಾರದಾ 'ಎ' ತಂಡ -೨; ಥ್ರೋಬಾಲ್: ಲಕ್ಕಿ ಫ್ರೆಂಡ್ಸ್, ಜೈಪುರ-೧, ಜೆ.ಸಿ.ಬಿ.ಎಂ. ಕಾಲೇಜು-೨.

ಸದರಿ ಕ್ರೀಡಾ ಕೂಟದ ೧೯೮೪-೮೫ರ ಕಾರ್ಯಕಾರಿ ಸಮಿತಿ: ಎಸ್.ಜಿ. ರಾಜಶೇಖರ ಹೆಗ್ಡೆ (ಅಧ್ಯಕ್ಷ), ಹಂದಿಗದ್ದೆ ಯೋಗೀಶ್ (ಕಾರ್ಯದರ್ಶಿ), ಜಿ.ಎಂ. ಶ್ರೀನಿವಾಸ್ ಮತ್ತು ಎಸ್.ಎಸ್. ರತ್ನಾಕರ್ (ಕೋಶಾಧಿಕಾರಿಗಳು) ಹಾಗೂ ೧೪ ಮಂದಿ ಸದಸ್ಯರು.

ಕಾಂಗ್ರೆಸ್ಸಿನಿಂದ ಅಕ್ಕಿ ದಾನ

ಶೃಂಗೇರಿ: ಇಲ್ಲಿ ನ. ೧೦ರಂದು ಕಾಂಗ್ರೆಸ್ಸಿನವರು ಸಾರ್ವಜನಿಕರಿಂದ ೨೨ ಕ್ವಿಂಟಾಲ್ ಅಕ್ಕಿ ಸಂಗ್ರಹಿಸಿ, ೨೨೦೦ ಜನ ಬಡವರಿಗೆ ಹಂಚಿದರು. ಶೃಂಗೇರಿ ಜಗದ್ಗುರುಗಳು ಕಾರ್ಯಕ್ರಮ ಉದ್ಘಾಟಿಸಿದರು.

ಅ.ಭಾ.ವಿ.ಪ. ಸಭೆ

ನ. ೧೦ರಂದು ನಡೆದ ಅ.ಭಾ.ವಿ.ಪ. ಕೊಪ್ಪ ಶಾಖೆಯ ಸಭೆಯಲ್ಲಿ ಅಗಲಿದ ಪ್ರಧಾನಿಯ ಆತ್ಮಕ್ಕೆ ಶಾಂತಿ ಕೋರಲಾಯಿತು. ಅಂಬೇಡ್ಕರ್ ಪುಣ್ಯತಿಥಿ ಅಂಗವಾಗಿ(ಡಿ.೬) ಸಾಮೂಹಿಕ ಸಮತಾ ದಿನ, ಡಿ. ೧೦, ೧೧ರಂದು ಜಿಲ್ಲಾ ಮತ್ತು ಕ್ಷೇತ್ರ ಮಟ್ಟದ ಸಾಂಸ್ಕೃತಿಕ ಮತ್ತು ಕ್ರೀಡಾಕೂಟಗಳನ್ನು ನಡೆಸಲು ತೀರ್ಮಾನಿಸಲಾಯಿತು. ಪ್ರಾಂತ್ಯ ಸಂಘಟಕ ವಿಷ್ಣುಕಾಂತ್ ಸಭೆಯಲ್ಲಿ ಭಾಗವಹಿಸಿದ್ದರು.

ಯುವಜನ ಫೆಡರೇಶನ್

ನ.೧೧ರಂದು ನಡೆಯಬೇಕಾಗಿದ್ದ ಅಖಿಲ ಭಾರತ ಯುವಜನ ಫೆಡರೇಶನ್ನಿನ ಜಿಲ್ಲಾ ಸಮ್ಮೇಳನವನ್ನು ಶೋಕಾಚರಣೆ ನಿಮಿತ್ತ ಡಿಸೆಂಬರ್ ೨ಕ್ಕೆ ಮುಂದೂಡಲಾಗಿದೆ.

ವಿದ್ಯಾ ಮಹಿಳಾ ಸಮಾಜ,

ಬಾಳಗಡಿ, ಕೊಪ್ಪ.

ತಾ|| 9-11-84ರಂದು ನಡೆದ ಅದೃಷ್ಟ ಬಹುಮಾನ ಯೋಜನ ಡ್ರಾ ಫಲಿತಾಂಶ:

ಮೊದಲ ಬಹುಮಾನ	2128
2ನೇ "	0293
3ನೇ "	1731

ಸೂಚನೆ: 1) ತಾ 1-11-84ರಂದು ನಡೆಯಬೇಕಾಗಿದ್ದ ಡ್ರಾವನ್ನು ಶೋಕಾಚರಣೆ ಪ್ರಯುಕ್ತ 9-11-84ರಂದು ನಡೆಸಿರುತ್ತೆ. 2) ಡ್ರಾ ದಿನಾಂಕದಿಂದ ಒಂದು ತಿಂಗಳೊಳಗಾಗಿ ಬಹುಮಾನಿತ ಟಿಕೆಟ್ ಹಾಜರುಪಡಿಸಿ ಸಮಾಜದ ಅಧ್ಯಕ್ಷಿಣಿಯವರಿಂದ ಬಹುಮಾನ ಪಡೆಯಬಹುದು.

ಈ ಅದೃಷ್ಟ ಬಹುಮಾನ ಯೋಜನೆಯ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನರ್ಪಿಸುತ್ತೇವೆ.

ಅಧ್ಯಕ್ಷಿಣಿ ಮತ್ತು ಸದಸ್ಯೆಯರು.

ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿ, ನರಸಿಂಹರಾಜಪುರ.

ನಂ. ಎ. ಇಎಸ್‌ಟಿ. ಸಿಆರ್. 2/84-85

ದಿನಾಂಕ: 8-11-84
ನರಸಿಂಹರಾಜಪುರ

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಈ ಕೆಳಗೆ ಕಾಣಿಸಿದ ಕೆಲಸಕ್ಕೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ನರಸಿಂಹರಾಜಪುರ, ಇವರು ಗುತ್ತಿಗೆದಾರರಿಂದ ಮೊಹರಾದ ಶೇಕಡಾವಾರು ದರದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಕೆಲಸದ ಹೆಸರು	ಟೆಂಡರ್ ಇಡಲಾದ ಅಂದಾಜು ಮೊತ್ತ	ಅಂಗೀಕೃತ ರೂಪದಲ್ಲಿ ಇ.ಎಂ.ಡಿ.	ಕೆಲಸ ಪೂರೈಸಲು ಕಾಲಮಿತಿ	ಅರ್ಹ ಕಂಟ್ರಾಕ್ಟ ದಾರರ ದರ್ಜೆ	ಟೆಂಡರ್ ಬೆಲೆ
1.	ಬಾಳೆಹೊನ್ನೂರು ಗ್ರಾಮದ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿನಿ ನಿಲಯದ ಕಟ್ಟಡ ನಿರ್ಮಾಣ	1,52,441-00 ಎನ್.ಆರ್.ಇ.ಪಿ. ಮೊತ್ತ ಸೇರಿ	4000.00	ಕೆಲಸ ವಹಿಸಿದ ದಿನಾಂಕದಿಂದ 6 ತಿಂಗಳ ಕಾಲ (ಮಳೆಗಾಲ ಬಿಟ್ಟು)	3ನೇ ದರ್ಜೆ ಮತ್ತು ಮೇಲ್ಪಟ್ಟ	10-00

ಸೂಚನೆ:- ಟೆಂಡರ್ ಪತ್ರವನ್ನು ವಿವರಪಟ್ಟಿ ನೀಡುವ ದಿನಾಂಕ: 16-11-84 ರಿಂದ 20-11-84ರ ವರೆಗೆ 10-30ರಿಂದ 5-30ರವರೆಗೆ ಕಛೇರಿ ಸಮಯದವರೆಗೆ ಪಡೆಯಬಹುದು.

2) ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 28-11-84ರ ಸಾಯಂಕಾಲ 5-00 ಗಂಟೆವರೆಗೆ

3) ಕಾಮಗಾರಿಯನ್ನು ಅಂದಾಜಿನಂತೆ/ನಕಾಶೆಯಂತೆ ತೆಗೆದುಕೊಳ್ಳಲಾಗುವುದು.

4) ಕಾಮಗಾರಿಯ ಅಂದಾಜು ಮತ್ತು ನಕಾಶೆಯನ್ನು ತಿದ್ದುವ ಅಧಿಕಾರ ಪ್ರಕಟಣೆ ಅಧಿಕಾರಿ ರುತ್ತೆ.

5) ಟೆಂಡರ್ ಒಪ್ಪುವ ಅಥವ ತಿರಸ್ಕರಿಸುವ ಅಧಿಕಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಕಾದಿರಿಸಲಾಗಿದೆ.

6) ಈ ಟೆಂಡರ್ ಎನ್.ಆರ್.ಇ.ಪಿ. ನಿಬಂಧನೆಗನ್ನು ಬಿಟ್ಟು ಅನ್ವಯಿಸುತ್ತದೆ.

(ಸಹಿ) **ಎಸ್. ಎನ್. ಎ. ಆಫ್,**
ಕ್ಷೇತ್ರಾಭಿವೃದ್ಧಿ ಅಧಿಕಾರಿ, ನರಸಿಂಹರಾಜಪುರ.

ಸಂಖ್ಯೆ: ಹೆಚ್‌ಐ/ಪಿಆರ್/452/84-85

ಪುರಸಭಾ ಕಾರ್ಯಾಲಯ,
ಕೊಪ್ಪ, ದಿನಾಂಕ: 13-11-1984.

ಟೆಂಡರು ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯ ನೋಂದಾಯಿತ ಅಂಗೀಕೃತ ಕಂಟ್ರಾಕ್ಟ್‌ದಾರರಿಂದ ಈ ಕೆಳಗೆ ಕೊಡಲಾದ ಕೆಲಸಗಳಿಗಾಗಿ ನಿಗದಿತ ಫಾರಂನಲ್ಲಿ ದ್ವಿಪ್ರತಿಯಲ್ಲಿರುವ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹಾಗೂ ಮೀನು ಮಾರ್ಕೆಟ್ ಮೇಲ್ ಛಾವಣಿಗೆ ಬೇಕಾದ ಜಿಂಕ್ ಶೀಟ್ ಒದಗಿಸಲು ಟೆಂಡರು ಕರೆಯಲು ಅವುಗಳನ್ನು ಅಧ್ಯಕ್ಷರು ಯಾ ಮುಖ್ಯಾಧಿಕಾರಿಗಳು, ಪುರಸಭೆ, ಕೊಪ್ಪ, ಇಲ್ಲಿ ದಿನಾಂಕ 30-11-84ರ ಸಂಜೆ 5-00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳಿಗೆ ಟೆಂಡರ್ ಫಾರಂಗಳನ್ನು ಮುಖ್ಯಾಧಿಕಾರಿಗಳು, ಪುರಸಭೆ, ಕೊಪ್ಪ, ಇಲ್ಲಿ ದಿನಾಂಕ 28-11-84ರ ಸಂಜೆ 5-00 ಗಂಟೆವರೆಗೆ ರೂ. 2-00 ಪಾವತಿಸಿ ಪಡೆಯಬಹುದು. ಅಂಚೆ ಮೂಲಕ ಬರುವ ಮನವಿಯನ್ನು ದಿನಾಂಕ 26-11.84ರಂದು ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕು. ಕೆಲಸಗಳ ಇತರ ವಿವರ ಮತ್ತು ಟೆಂಡರ್ ಪತ್ರಗಳನ್ನು ಪುರಸಭಾ ಕಾರ್ಯಾಲಯ, ಕೊಪ್ಪ, ಇಲ್ಲಿ ಪಡೆಯಬಹುದು.

ಕ್ರಮ ಸಂಖ್ಯೆ	ಕಾಮಗಾರಿಗಳ ವಿವರ	ಎಸ್ಟಿಮೇಟ್ ನಂ.	ಟೆಂಡರ್ ಕಾಯ್ದಿರಿಸಿದ ಅಂದಾಜು ವೆಚ್ಚ	ಇ.ಎಂ.ಡಿ. ಕಟ್ಟಬೇಕಾದ ಮೊಬಲಗು ಶೇ: 2.5	ಕೆಲಸ ಮುಗಿಸಲು ಕಾಲ ಮಿತಿ
1.	ತಿಲಕ್ ರಸ್ತೆಗೆ ಜಲ್ಲಿ ರಸ್ತೆ	1	7000-00	175-00	1 ತಿಂಗಳು
2.	"	2	6700-00	167-50	"
3.	ಹಸಿ ಮೀನು ಸ್ಟಾಲು (ಜಿಂಕ್ ಶೀಟನ್ನು ಪುರಸಭೆ ವತಿಯಿಂದ ಕೊಡಲಾಗುವುದು.)	1	13200-00	320-00	"
4:	ಒಣ ಮೀನು ಸ್ಟಾಲು (ಜಿಂಕ್ ಶೀಟನ್ನು ಪುರಸಭೆ ವತಿಯಿಂದ ಕೊಡಲಾಗುವುದು.)	1	31000-00	775-00	"
5.	ಮೀನು ಮಾರ್ಕೆಟ್ ಮೇಲ್ ಛಾವಣಿಗೆ ಜಿಂಕ್ ಶೀಟನ್ನು ಒದಗಿಸುವುದಕ್ಕೆ 50-00)(4-00 ಮೀಟರ್ ಅಳತೆಗೆ	1	12000-00	-	"

(ಸಹಿ) **ಆರ್. ಗುಂಡೂರಾವ್,**
ಮುಖ್ಯಾಧಿಕಾರಿಗಳು, ಪುರಸಭಾ ಕಾರ್ಯಾಲಯ
ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: **ಸಿರಿಮನೆ ನಾಗರಾಜ್,** ಅಚ್ಚು: ದೀಪಿಕೆ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: **ಕಲ್ಕುಳಿ ವಿಠಲ ಹೆಗ್ಡೆ**